ಶ್ರೀಮತಿ ಯಶೋಧರಾ ದಾಸಪ್ಪ.—ಅಲ್ಲಿ ಜಮೀನು ಇದ್ದದ್ದರಿಂದಲೇ 37 ಸಾವಿರ ರೂಪಾಯಿ ಅರಿಕೆರೆ ಕಾಲೋನಿಗೆ ಮಂಜೂರು ಆಗಿರುವುದು.

Sri D. PARAMESHWARAPPA.—Did he not ask for further release of 100 acres for the purpose of the colony?

ಶ್ರೀಮತಿ ಯಶೋಧರಾ ದಾಸಪ್ಪ.—ಅದು ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ.

1-30 P.M.

Co-operative Societies for the Construction of Houses for Harijans.

*Q.—262. Smt. NAGAMMA (Kalmala).—

Will the Government be pleased to state :—

(*a*) the number of Co-operative Societies registered in the State for the construction of houses for Harijans ;

(*b*) out of them, the number of Societies to which necessary amount has been provided by Government ;

(*c*) the number of Societies that have not yet been provided with the amount ;

(*d*) the total amount prayed for by these Societies ;

(*e*) when they would provide the same ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) 238.

(*b*) 65.

(*c*) 173.

(*d*) Rs. 20,00,000.

(*e*) A sum of Rs. 6 lakhs has been provided during the current year and has been fully utilised. Efforts are being made to secure a loan of Rs. one crore from Life Insurance Corporation of India for the purpose. No sooner the loan from L. I. C. is secured than the demand can be fully met.

ಶ್ರೀಮತಿ ನಾಗಮ್ಮ.—(ಬಿ) ಪ್ರಶ್ನೆಗೆ ಉತ್ತರವಾಗಿ 65 ಸಂಘಗಳಿಗೆ ಮೊಬಲಗನ್ನು ಒದಗಿಸಲಾಗಿದೆಯೆಂದು ಹೇಳಿದೆ. ಮೈಸೂರು ಜಿಲ್ಲೆಯಲ್ಲಿ ಯಾವ ಯಾವ ಸಂಘಗಳಿಗೆ ಹಣ ಒದಗಿಸಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಂದು ದೊಡ್ಡ ಲಿಸ್ಟ್ ಇದೆ, ಬೇಕಾದರೆ ಕೊಡುತ್ತೇನೆ, ಅವರು ನೋಡಿಕೊಳ್ಳಬಹುದು.

ಶ್ರೀ ಸಿ. ಆರ್. ರಂಗೇಗೌಡ.—(ಇ) ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ಕಳೆದ ಸಾಲಿನಲ್ಲೂ ಆರ್ಥಿಕ ಮಂತ್ರಿಗಳು ಉತ್ತರ ಹೇಳಿದ್ದರು. ಆ ಸಂಬಂಧದಲ್ಲಿ ಬೇಗ ಹಣ ಪಡೆಯಲು ಏನು ಪ್ರಯತ್ನ ಮಾಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಜೀವ ವಿಮಾ ಕಾರ್ಪೊರೇಷನ್ನಿನವರು ಅನೇಕ ಪರತ್ತುಗಳನ್ನು ಹಾಕಿ ವಿವರಣೆ ಕೇಳಿದ್ದರು. ಅದನ್ನೆಲ್ಲಾ ಕೊಡಲಾಗಿದೆ. ಶೀಘ್ರವಾಗಿ ಹಣ ದೊರೆಯಬಹುದೆಂಬ ಆಶೆ ಇದೆ.

ಶ್ರೀ ಸಿ. ಆರ್. ರಂಗೇಗೌಡ.—ಒಂದು ಕೋಟಿ ರೂಪಾಯಿಗಳ ಸಾಲ ಕೇಳಿದ್ದೀರಿ. ನಮ್ಮ ನಂಸ್ಥಾನದಲ್ಲಿ ಎಷ್ಟು ಹರಿಜನ ಕುಟುಂಬಗಳಿವೆ ? ಒಂದು ಕೋಟಿ ರೂಪಾಯಿ ತೆಗೆದುಕೊಂಡು ಎಷ್ಟು ದಿವಸಗಳಲ್ಲಿ ಆ ಕುಟುಂಬಗಳಿಗೆ ಮನೆಗಳನ್ನೊದಗಿಸುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೊನ್ನೆತಾನೆ ಆ ವಿಚಾರ ಹೇಳಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಮನೆ ಇಲ್ಲದಿರುವ ಹರಿಜನ ಕುಟುಂಬಗಳಿಗೆ ಕುಟುಂಬ ಒಂದಕ್ಕೆ 3 ಸಾವಿರ ರೂಪಾಯಿಗಳ ಪ್ರಕಾರ ಸಾಲ ಕೊಡುವುದಾದರೆ 54 ಕೋಟಿ ರೂಪಾಯಿಗಳು ಬೇಕಾಗುತ್ತವೆ.

ಶ್ರೀ ಗೋಪಾಲ ಸಾಲೆನ್ನ.—(ಇ) ಪ್ರಶ್ನೆಗೆ ಉತ್ತರವಾಗಿ 65 ಎಂದು ಹೇಳಿದೆ. ಅದರಲ್ಲಿ ಎಷ್ಟಕ್ಕೆ ಮೊದಲನೆ ಇನ್‌ಸ್ಟಾಲ್‌ಮೆಂಟ್ ಕೊಟ್ಟು ಎರಡನೆಯ ಇನ್‌ಸ್ಟಾಲ್‌ಮೆಂಟನ್ನು ಕೊಟ್ಟಿರು ಫುದಿಲ್ಲ ? ಕಳೆದ ವರ್ಷ ಕಟ್ಟಿರುವ ಮನೆಗಳಲ್ಲಿ ಬದ್ದಿರುವುದೆಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಅತಿಶಯೋಕ್ತಿಯ ಮಾತು. ಯಾವುದೂ ಬದ್ದಿಲ್ಲ. ಮೊದಲನೆಯ ಇನ್‌ಸ್ಟಾಲ್‌ಮೆಂಟ್ ಕೊಟ್ಟಿರುವ ಕಡೆ ಈ ವರ್ಷ ಸಾಧ್ಯವಿರುವ ಕಡೆ ಎರಡನೆಯ ಇನ್‌ಸ್ಟಾಲ್‌ಮೆಂಟ್ ಕೊಡಲಾಗಿದೆ. ಸಾಧ್ಯವಾಗಿಲ್ಲದಿರುವ ಕಡೆ ಏಪ್ರಿಲ್‌ನಲ್ಲಿ ಕೊಡಲಾಗುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನರ್ಕಾರದ ಧೋರಣೆ ಏನು ? ಹರಿಜನರಿಗೆ ಮನೆ ಒದಗಿಸ ಬೇಕೆಂಬುದೇ ಅಥವಾ ನುಮ್ಮನೆ ಸೊಸೈಟಿಗಳ ಹೆನರನ್ನು ಹೇಳಿ ಹೀಗೆ ಮಾಡಿದ್ದೇವೆಂದು ಹೇಳುವುದೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಹಕಾರ ನಂಘಗಳ ಮೂಲಕವಾದರೆ ಬೇಗ ಮನೆಗಳಾಗುತ್ತವೆ ಎಂಬುದನ್ನು ಮನಗಂಡು ಅವುಗಳ ಮೂಲಕ ನಹಾಯ ನೀಡಬೇಕೆಂಬುದೇ ನರಕಾರದ ಉದ್ದೇಶ.

ಶ್ರೀ ಆರ್. ಎನ್. ಪಾಟೀಲ್.—ರಿಜಿಸ್ಟರಾಗಿರುವ ಸೊಸೈಟಿಗಳ ವಶದಲ್ಲಿ ನೈಟುಗಳಿವೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನೈಟುಗಳಿಗಾಗಿ ಆ ನಂಘಗಳು ಬೇಕಾದ ಕಾರ್ಯಕ್ರಮ ಕೈಕೊಂಡಿವೆ.

Sri SANJEEVANATH AIKALA.—Will Government think of giving some subsidy for the purpose of constructing houses as originally intended?

Sri RAMAKRISHNA HEGDE.—I remember to have stated the scheme in this respect which the Government has prepared. I wish to repeat that the following help will be given to the Harijans: (1) a loan ranging from Rs. 1,500 to 3,000 at the rate of two per cent ; (2) hundred rupees worth of timber will be supplied to them free of cost and (3) every member who has subscribed Rs. 10 towards the share capital will be given a loan of Rs. 90 to enable him to deposit Rs. 100.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹರಿಜನರಿಗೆ ಮನೆಗಳಿಗೆ ಗ್ರಾಂಟು ಕೊಡುವಾಗ ಎಷ್ಟು ಹಣ ಕೊಡಲಾಗುವುದು ? ಅದನ್ನು ನಾಲದ ರೂಪದಲ್ಲಿ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೊಡುವುದು ನಾಕಾಗುವುದಿಲ್ಲ, ಹೆಚ್ಚು ಕೊಡಬೇಕೆಂಬ ಉದ್ದೇಶ ವಿದೆ.ಅದನ್ನು ಮೊನ್ನೆ ಕೂಡ ಹೇಳಿದೆ. ಹಿಂದೆ 1962-63, 1963-64 ರಲ್ಲಿ ಮತ್ತು ಈ ವರ್ಷ ನೇರಿ ನುಮಾರು 30 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ. ನನಗೆ ನೆನಪಿರುವ ಹಾಗೆ ಮೊದಲು ಮನೆ ಕಟ್ಟಿಕೊಳ್ಳವುದಕ್ಕೆ ಒಬ್ಬರಿಗೆ 400 ರೂಪಾಯಿಗಳ ಪ್ರಕಾರ ಮುಫತ್ತಾಗಿ ಪ್ರತಿ ವರ್ಷ ನುಮಾರು 10—11 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದರು.

Smt. B. BASAVARAJESWARI.—In the current budget how much is given to Raichur ?

Sri RAMAKRISHNA HEGDE.—It will take some time to sort out the societies ; I will give the list to the Hon'ble Member.

ಶ್ರೀ ಗೋಪಾಲ ಸಾಲೆನ್ನ.—ಒಂದು ಕೋಟಿ ರೂಪಾಯಿ ಕೊಡುವುದಾಗಿ ಕಾಗದದಲ್ಲಿ ತೋರಿಸಿ; ಟೋಟಲ್ಲಾಗಿ ಡಿನ್ಯೆಮಾಡುತ್ತೀರಾ ಅಥವಾ ಕೊಡ ವ ಭರವಸೆ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ನದಸ್ಯರಿಗೆ ನಮಾಧಾನವಾಗುವುದಾದರೆ ವಿವರಣೆ ಕೊಡುತ್ತೇನೆ. 1961-62ನೆಯ ನಾಲನಲ್ಲಿ 1,43,923 ರೂಪಾಯಿ, 1962-63 ರಲ್ಲಿ 5,69,349 ರೂಪಾಯಿ, 1963—64 ರಲ್ಲಿ 24 ಲಕ್ಷರೂಪಾಯಿ ಮಂಜೂರು ಮಾಡಿದೆ. ಈಗ ಒಂದು ಕೋಟಿ ರೂಪಾಯಿ ಕೊಡಬೇಕೆಂದಿದೆ. ಇದರಿಂದ ಎಷ್ಟು ಈ ನಂಬಂಧದಲ್ಲಿ ಪ್ರಯತ್ನ ನಡೆದಿದೆ ಎಂಬುದನ್ನು ಮಾನ್ಯ ನದಸ್ಯರು ಮನಗಾಣಬಹುದು.

ಶ್ರೀ ಎಂ. ಎನ್. ಕೃಷ್ಣಪ್ಪಂಗ್.—ಹರಿಜನರಿಗೆ ಈಗ ಕೊಡುವುದರಲ್ಲಿ ಅರ್ಧಮನೆ ಕಟ್ಟಿಕೊಳ್ಳುವುದಕ್ಕೆ, ಈ ಉಳಿದರ್ಧ ಜಮೀನು ಕೊಂಡುಕೊಳ್ಳುವುದಕ್ಕೆ ಕೊಡಲು ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರು ಉದ್ದೇಶ ತಿಳಿದುಕೊಂಡಿಲ್ಲ. ಮೊದಲು ಆಶ್ರಯವಿರಬೇಕು. ಅದಿದ್ದರೆ ಎಲ್ಲಾದರೂ ಕೆಲಸಮಾಡಿ ಜೀವನಮಾಡಬಹುದು.

Removal of Labourers Working in Factories.

*Q.—266. Sri J. NARAYANAPPA (Mulbagal).—

Will the Government be pleased to state :—

(*a*) whether they are aware that a large number of labourers working in the factories in the State are being removed from service by the owners, without any reason ;

(*b*) whether they are also aware that such poor labourers find it difficult to file disputes with the conciliation officer in view of his office being situated at a very for off place ;

(*c*) whether they would taks action to amend the legislation suitably to empower both the labour officer and the labour inspector to entertain and dispose of such disputes with a view to facilitate poor labourers ?

*A.—Sri D. DEVARAJ URS (Minister for Labour, Housing and Transport).—

(*a*) No.

(*b*) No.

(*c*) No. The existing provisions under various labour laws are sufficient and no amendment is necessary.

ಶ್ರೀ ಜೆ. ನಾರಾಯಣಪ್ಪ.—ಮೊದಲು ಪಟ್ಟಣಗಳಲ್ಲಿ ಮಾತ್ರ ಇಂಡಸ್ಟ್ರಿಯಲ್ ವರ್ಕ್‌ಷಾಪ್‌ಗಳು ಮುಂತಾದುವು ಇದ್ದುವು. ಈಗ ಹಳ್ಳಿಗಳಲ್ಲೂ ವ್ಯವಸಾಯದ ಮುಟ್ಟುಗಳು ಮೊದಲಾದವನ್ನು ಯಾರುಮಾಡುವುದಕ್ಕೆ ವರ್ಕ್‌ಷಾಪು ಮತ್ತು ಸಣ್ಣ ಕಾರ್ಖಾನೆಗಳಿವೆ. ಅವು ರಿಜಿಸ್ಟರಾಗಿಲ್ಲವೆಂದು ಹೇಳುತ್ತಾರೆ. ಅಲ್ಲಿ ಕೆಲಸ ಮಾಡುವವರಿಗೆ ರಕ್ಷಣೆ ನೀಡಲು ಏನಾದರೂ ಶಾಸನಮಾಡುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ಅವರು ಕೇಳುವ ಪ್ರಶ್ನೆಗೆ ಉತ್ತರ ಹೇಳುವುದು ಸ್ವಲ್ಪ ಕಷ್ಟವಾಗಿದೆ. ಯಾವ ಯಾವ ಕೂಲಿಗಾರರು ಕಾನೂನಿಗೆ ಒಳಪಡುತ್ತಾರೊ ಅವರೆಲ್ಲರಿಗೂ ರಕ್ಷಣೆ ಕೊಡುವುದು ಸಾಧುವಾದುದು. ಫ್ಯಾಕ್ಟರಿ ಎಂಬುದಕ್ಕೆ ವಿವರಣೆ ಇದೆ. ಅಕ್ಟ್ ಪ್ರಕಾರ ಅನೇಕ ಕಾರ್ಖಾನೆಗಳು ರಿಜಿಸ್ಟರಾಗಿವೆ. ಅನೇಕ ಸಂದರ್ಭಗಳಲ್ಲಿ ಕೆಲವು ರಿಜಿಸ್ಟರಾಗದಿರುವುದೂ ಉಂಟು, ಕಾನೂನುಬದ್ಧವಾಗಿ ರಿಜಿಸ್ಟರಾಗಬೇಕಾದದ್ದು ಆಗದಿದ್ದರೆ ಅಂಥಾದ್ದನ್ನು ಗಮನಕ್ಕೆ ತಂದರೆ ರಿಜಿಸ್ಟರುಮಾಡೋಣ. ಕೂಲಿಗಾರರಿಕೆ ಸಿಕ್ಕಬೇಕಾದ ರಕ್ಷಣೆ ಕಾನೂನು ಪ್ರಕಾರ ದೊರಕಿಸಿಕೊಡಲು 76 ಜನ ಲೇಬರ್ ಇನ್‌ಸ್ಪೆಕ್ಟರುಗಳು ನಂಸ್ಥಾನಾಮಳೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ದೂರು ಕೊಟ್ಟಾಗ ಯಾವ ರೀತಿ ರಕ್ಷಣೆ ಕೊಡಬೇಕೋ ಆ ರೀತಿ ಕೊಡಲಾಗುತ್ತದೆ.

ಶ್ರೀ ಜೆ. ನಾರಾಯಣಪ್ಪ.—ಸರ್ಕಲ್‌ಗಳಲ್ಲಿ ಲೇಬರ್ ಇನ್‌ಸ್ಪೆಕ್ಟರುಗಳು ಎಂದು ಇದ್ದಾರೆ. ಹಳ್ಳಿಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ದೂರು ಕೊಟ್ಟರೆ ಆ ದೂರನ್ನು ವಿಚಾರಿಸುವ ಹಾಗೆ ಲೇಬರ್ ಇನ್‌ಸ್ಪೆಕ್ಟರುಗಳಿಗೆ ಸೂಚನೆ ಕೊಟ್ಟು ಏರ್ಪಾಡು ಮಾಡಿಕೊಡುತ್ತೀರಾ ಸ್ವಾಮಿ ?